ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸಾಲ ತೆಗೆದುಕೊಂಡು ಮಾಡುತ್ತೀರಾ?

ಶ್ರೀ ಎಂ.ಎಸ್. ಪಾಟೀಲ್ :— ಲೋನ್ ತೆಗೆದುಕೊಂಡೇ ಮಾಡಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಸಾಲ ಕೊಡುವವರ ಆಧಾರ ಇಟ್ಟುಕೊಂಡು ನೀವು ಕುಡಿಯುವ ನೀರಿಗೆ ಹಣ ಕೊಡುತ್ತೇವೆಂದು ಹೇಳಿದರೆ ಇದು ಖಂಡಿತಾ ಸಾಧ್ಯ ಇಲ್ಲ. ಸಾಲ ಕೊಡುವವರ ಮೇಲೆ ಆಧಾರವಾಗಿಟ್ಟುಕೊಂಡು ಕುಡಿಯುವ ನೀರು ಕೊಡುವುದಕ್ಕೆ ಆಗುತ್ತದೆಯೇ? ಸಾಲ ಕೊಡುವುದಿಲ್ಲ ಎಂದು ಹೇಳುತ್ತಾರೆ. ಈಗ ಇದೇ ಪ್ರಶ್ನೆ ಆಗಿದ್ದು. ಡ್ಯಾನಿಡಾದಲ್ಲಿ ಸೇರಿಸಿದ್ದುದು ಆಗಲಿಲ್ಲ. ಏಕೆಂದರೆ ಅವರು ಬೇರೆ ಬೇರೆ ಕಾರಣದಿಂದಾಗಿ ಹಣ ಕೊಡುವುದಿಲ್ಲ ಎಂದು ಆಯಿತು. ಸಾಲ ಕೊಡತಕ್ಕಂಥವರ ಪ್ರಶ್ನೆಯ ಆಧಾರದ ಮೇಲೆ ಬಿದ್ದರೆ ಏನೇನು ಆಗಬಹುದು ಎನ್ನುವ ಉದಾಹರಣೆ ಹೇಳಿದೆ. ಮೊದಲು ಡ್ಯಾನಿಡಾದವರು ಎಸ್ಟಿಮೇಟ್ ಮಾಡಿ ಎಲ್ಲಾ ಸ್ಕೀಮ್ ಮಾಡಿದರು. ಅವರು ಹಣ ಕೊಡುವುದಿಲ್ಲ ಎಂದು ಹೇಳಿದರು. ಅವರು ಸ್ಕೀಮನ್ನು ಕ್ಲೋಸ್ ಮಾಡಿಕೊಂಡು ಹೋದಾಗ ಈ ಪ್ರಶ್ನೆ ಬಂತು. ಅದೇ ರೀತಿಯಲ್ಲಿ ಹಲವಾರು ಉದಾಹರಣೆಗಳು ಇವೆ. ಓಇಸಿಎಫ್‌ನವರು ಕೊಡುತ್ತಿರುವ ಸಾಲದ ವಿಚಾರ. ಅದೇನೋ ಬಾಂಬ್ ಎಂದು ಹೇಳಿ ಅವರು ನಿಂತು ಬಿಟ್ಟರು. ಹಾಗಾಗಿ ನಿಂತು ಹೋಗಿದೆ. ಸಾಲ ಕೊಡುವವರ ಆಧಾರದ ಮೇಲೆ ಬಿದ್ದು ನೀವು ಕುಡಿಯುವ ನೀರಿಗೆ ಹಣ ಒದಗಿಸುತ್ತೇವೆಂದರೆ ಇದು ಖಂಡಿತ ಸಾಧ್ಯ ಇಲ್ಲ. ನೀವು ನಿಮ್ಮ ಹಣಕಾಸಿನಲ್ಲಿ ಒದಗಿಸಲಿಕ್ಕೆ ಸಾಧ್ಯ ಆಗಲೇಬೇಕು. ಇಲ್ಲ ಎಂದರೆ ನಡೆಯುವುದಿಲ್ಲ. ಆದ್ದರಿಂದ ಅದನ್ನು ಸ್ಪಷ್ಟವಾಗಿ ಹೇಳಿ ಬಿಡಿ. ಸಾಲದ ಮೇಲೆ ದಯವಿಟ್ಟು ಹೇಳಬೇಡಿ.

ಶ್ರೀ ಎಂ.ಎಸ್. ಪಾಟೀಲ್ :— ಈಗಾಗಲೇ ನಾನು ಹೇಳಿದೆ. ಅಲ್ಲಿಯ ಅಭಾವವನ್ನು ಅರಿತುಕೊಂಡು ಮುಂದಿನ ಯೋಜನೆಯಲ್ಲಿ ಅವರಿಗೆ ಒದಗಿಸಿಕೊಡತಕ್ಕ ವ್ಯವಸ್ಥೆ ಮಾಡುತ್ತೇನೆ.

ಗುಲ್ಬರ್ಗಾ ಜಿಲ್ಲೆಯಲ್ಲಿರುವ ಬಿ.ಸಿ.ಎಂ. ಹಾಸ್ಟೆಲ್‌ಗಳು.

38(416) ಶ್ರೀ ರೇವುನಾಯ್ಕ ಬೆಳಮಗಿ (ಕಮಲಾಪುರ) :— ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ 13 ಕ್ಷೇತ್ರಗಳಲ್ಲಿ ಇರುವ ಬಿಸಿಎಂ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು? (ಕ್ಷೇತ್ರವಾರು ವಿವರ ನೀಡುವುದು)

ಅ) ಇನ್ನು ಅನೇಕ ಕ್ಷೇತ್ರಗಳಿಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡದಿರಲು ಕಾರಣಗಳೇನು? ಮತ್ತು ಅಂಥ ಕ್ಷೇತ್ರಗಳಿಗೆ ಎಂದಿನಿಂದ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗುವುದು?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು) :—

ಅ) ಗುಲ್ಬರ್ಗಾ ಜಿಲ್ಲೆಯ 13 ಕ್ಷೇತ್ರಗಳಲ್ಲಿ ಒಟ್ಟು 107 ವಿದ್ಯಾರ್ಥಿನಿಲಯಗಳು ಇರುತ್ತವೆ. (ಕ್ಷೇತ್ರವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ)

ಆ) 1998-99ನೇ ಸಾಲಿನಲ್ಲಿ ಹಣಕಾಸು ಲಭ್ಯತೆ ಹಾಗೂ ತಕ್ಷಣದ ಅಗತ್ಯದ ಮೇರೆಗೆ 40 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದ್ದು, ಇವುಗಳಲ್ಲಿ ಗುಲ್ಬರ್ಗಾ ಜಿಲ್ಲೆಯ ಅಫ್ಜಲ್‌ಪುರ ಸುರಪುರ ಆಳಂದ ಮತ್ತು ಜೀವರ್ಗಿ ಕ್ಷೇತ್ರಗಳಿಗೆ ತಲಾ ಒಂದೊಂದು ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಮಂಜೂರು ಮಾಡಲಾಗಿದೆ. ಅಲ್ಲದೆ ಗುಲ್ಬರ್ಗಾ ಕ್ಷೇತ್ರಕ್ಕೆ ಸೇರಿದಂತೆ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕೇಂದ್ರದಲ್ಲಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಒಂದನ್ನು ಮಂಜೂರು ಮಾಡಲಾಗಿದೆ. ಇತರೆ ಕ್ಷೇತ್ರಗಳಲ್ಲಿ ಅಗತ್ಯತೆಯನ್ನು ಆಧರಿಸಿ ವಿದ್ಯಾರ್ಥಿನಿಲಯ ಮಂಜೂರು ಮಾಡುವ ಬಗ್ಗೆ ಮುಂದಿನ ಹಣಕಾಸಿನ ವರ್ಷದಲ್ಲಿ ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 116ಕ್ಕೆ ಅನುಬಂಧ

ಕ್ರ ಸಂ.	ವಿಧಾನಸಭಾ ಕ್ಷೇತ್ರದ ಹೆಸರು	ವಿದ್ಯಾರ್ಥಿನಿಲಯಗಳ ಸಂಖ್ಯೆ		
		ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು	ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳು	ಒಟ್ಟು
1.	ಚಿಂಚೋಳಿ	7	—	7
2.	ಕಮಲಾಪುರ	5	—	5
3.	ಆಳಂದ	8	1	9
4.	ಗುಲ್ಬರ್ಗಾ	3	5	8
5.	ಶಹಾಬಾದ್	3	—	3
6.	ಅಫ್ಜಲ್‌ಪುರ	10	1	11

1	2	3	4	5
7.	ಚಿತ್ತಾಪುರ	9	—	9
8.	ಸೇಡಂ	6	—	6
9.	ಜೀವರ್ಗಿ	13	1	14
10.	ಗುರುಮಿಟ್ಕಲ್	10	1	11
11.	ಯಾದ್ಗೀರ್	4	1	5
12.	ಶಹಾಪುರ	12	—	12
13.	ಸುರಪುರ	7	—	7
	ಒಟ್ಟು	97	10	107

ಶ್ರೀ ರೇವುನಾಯ್ಕ ಬೆಳಮಗಿ :— ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಕಮಲಾಪುರ ಕ್ಷೇತ್ರ ಅತಿ ಹಿಂದುಳಿದ ಪ್ರದೇಶ. ನಮ್ಮ ಸಚಿವರೂ ಅಲ್ಲಿ ಪ್ರವಾಸ ಮಾಡಿದ್ದಾರೆ. ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಬಹಳಷ್ಟು ಇದ್ದಾರೆ. ಆದರೆ ನನ್ನ ಅಕ್ಕಪಕ್ಕದಲ್ಲಿ ಹಾಸ್ಟೆಲ್‌ಗಳನ್ನು ಕೊಟ್ಟಿದ್ದಾರೆ. ನನ್ನ ಕ್ಷೇತ್ರಕ್ಕೆ ಇಲ್ಲಿಯವರೆಗೆ ಹಾಸ್ಟೆಲ್ ದೊರಕಿಲ್ಲ. ಆದರಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಹಾಸ್ಟೆಲ್ ಇಲ್ಲದ ಕಾರಣ ಸಿಟಿಗೆ ಹೋಗಿ ಸೇರುತ್ತಿದ್ದಾರೆ. ಸಂಖ್ಯೆ ಕಡಿಮೆ ಆಗುತ್ತಿದೆ. ಅದಕ್ಕೆ ಮೆಟ್ರಿಕ್ ಪೂರ್ವ ಹಾಗೂ ಪದವಿಪೂರ್ವ ಕಾಲೇಜಿಗೆ ಹಾಸ್ಟೆಲ್ ಕೊಡಬೇಕೆಂದು ತಿಳಿಸಿ, ಸಚಿವರಿಗೆ ನನ್ನ ಕ್ಷೇತ್ರದ ವಿದ್ಯಾರ್ಥಿಗಳ ಪರವಾಗಿ ಕಳಕಳಿಯ ವಿನಂತಿ ಮಾಡುತ್ತೇನೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :— ಸನ್ಮಾನ್ಯ ಅಧ್ಯಕ್ಷರೆ, ಕಮಲಾಪುರ ಕ್ಷೇತ್ರದಲ್ಲಿ ಈಗಾಗಲೇ ಐದು ವಸತಿ ನಿಲಯಗಳು ಸರ್ಕಾರದಿಂದ ನಡೆಯುತ್ತಿದೆ. ಗುಲ್ಬರ್ಗಾ ಜಿಲ್ಲೆಗೆ ಸಂಬಂಧಿಸಿದಂತೆ ದೂಂಗಾರ್ಗಾ ಗ್ರಾಮದಲ್ಲಿ ಈಗಾಗಲೇ ನಾವು ಅಶ್ಯೂರೆನ್ಸ್ ಕೊಟ್ಟಿರುವ ಹಿನ್ನೆಲೆಯಲ್ಲಿ ಮಾರ್ಚ್ ಬಜೆಟ್‌ನಲ್ಲಿ ನಾವು ಪ್ರಾರಂಭ ಮಾಡುತ್ತೇವೆಂದು ಆ ಭಾಗದ ಜನರಿಗೆ ತಿಳಿಸಿರುವುದರಿಂದ ಏಂಡಿತವಾಗಿ ಅದಕ್ಕೆ ಒಪ್ಪಿದ್ದೇವೆ. ನಾವು ಈ ಸದನದ ಮುಖಾಂತರ ಭರವಸೆಯನ್ನು ಕೊಡುತ್ತಿದ್ದೇವೆ. ನಾವು ಅದನ್ನು ಮುಂದಿನ ಆಯವ್ಯಯದಲ್ಲಿ ಸೇರಿಸಿ ಮಂಜೂರಾತಿ ಕೊಡುತ್ತೇವೆ.

ಶ್ರೀ ರೇವುನಾಯ್ಕ ಬೆಳಮಗಿ :— ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಆಗುತ್ತಿದೆ. ಸಿಟಿಗೆ ಗ್ರಾಮೀಣ ಹುಡುಗರು ಸೇರುತ್ತಿದ್ದಾರೆ. ಪದವಿ ಪೂರ್ವ ಕಾಲೇಜಿಗೂ ಹಾಸ್ಟೆಲ್ ಕೊಡಬೇಕು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ :— ಮಾನ್ಯ ಅಧ್ಯಕ್ಷರೆ, ಪದವಿ ಪೂರ್ವ ಕಾಲೇಜಿನ ವಸತಿ ಬಗ್ಗೆ ಅವರು ಪ್ರಶ್ನೆ ಕೇಳಿಲ್ಲ. ಆದರೂ ಕೂಡ ನಾವು ಬಜೆಟ್‌ನಲ್ಲಿ ಈಗಾಗಲೇ ಮುಂದಿನ ಪದವಿ ಪೂರ್ವ ಕಾಲೇಜಿಗೆ ಇಟ್ಟಿಲ್ಲ. ಯೂನಿವರ್ಸಿಟಿ ಏನು ಇದೆ, ಅಲ್ಲಿ ಆರು ಪದವಿ ಪೂರ್ವ ಕಾಲೇಜನ್ನು ಪ್ರಾರಂಭ ಮಾಡಿದ್ದೇವೆ. ಮುಂದಿನ ಆಯವ್ಯಯದಲ್ಲಿ ನಿರ್ಮಾಣ ಮಾಡಿದರೆ ಖಂಡಿತವಾಗಿ ಅದರ ಬಗ್ಗೆ ಪರಿಶೀಲಿಸಿ ನಾನು ಸಹಾಯ ಮಾಡತಕ್ಕ ಕಾರ್ಯಕ್ರಮವನ್ನು ರೂಪಿಸುತ್ತೇವೆಂದು ಹೇಳಬಯಸುತ್ತೇವೆ.

ಗಿರಿಜನ ಉಪ ಯೋಜನೆಯಡಿ ಗೋಕಾಕ್ ತಾಲ್ಲೂಕಿಗೆ ಮಂಜೂರಾದ ಹಣ.

39(446) ಶ್ರೀ ನಾಯಕ್ ಚಂದ್ರಶೇಖರ್ ಸದಾಶಿವ (ಗೋಕಾಕ್) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಪಂಗಡಕ್ಕೆ ಸೇರಿದ ಗೋಕಾಕ್ ಕ್ಷೇತ್ರಕ್ಕೆ ಗಿರಿಜನ ಉಪ ಯೋಜನೆಗೆ ಬಿಡುಗಡೆಯಾದ ಹಣವೆಷ್ಟು?

ಆ) ಸದರಿ ಗಿರಿಜನ ಉಪಯೋಜನೆಯಲ್ಲಿ ಸಾಧಿಸಿದ ಪ್ರಗತಿ ಎಷ್ಟು?

ಇ) ಎಸ್.ಟಿ. ಮೀಸಲು ಕ್ಷೇತ್ರವಾದ ಗೋಕಾಕ್ ಕ್ಷೇತ್ರಕ್ಕೆ ಹೆಚ್ಚುವರಿ ಹಣ ನೀಡದಿರಲು ಕಾರಣವೇನು?

ಈ) ಗಿರಿಜನ ಉಪಯೋಜನೆಯಡಿ ಮಂಜೂರಾದ ಹಣದ ಬಳಕೆ ಸರಿಯಾಗಿ ಆಗಿದೆಯೇ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) ಗಿರಿಜನ ಉಪ ಯೋಜನೆಯಡಿ, ಗೋಕಾಕ್ ತಾಲ್ಲೂಕಿಗೆ 1997-98ನೇ ಸಾಲಿನಲ್ಲಿ ರಾಜ್ಯ ಯೋಜನೆಯಲ್ಲಿ ರೂ. 4.494 ಲಕ್ಷ ಮತ್ತು ವಿಶೇಷ ಕೇಂದ್ರೀಯ ನೆರವಿನಲ್ಲಿ ರೂ. 2.24 ಲಕ್ಷಗಳನ್ನು ಹಾಗೂ 98-99ನೇ ಸಾಲಿನಲ್ಲಿ ರಾಜ್ಯ ಯೋಜನೆಯಡಿ ರೂ. 1.015 ಲಕ್ಷ ಮತ್ತು ವಿಶೇಷ ಕೇಂದ್ರೀಯ ನೆರವಿನಡಿ ರೂ. 0.828 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.